ಮಂಗಳೂರು ವಿಶ್ವವಿದ್ಯಾನಿಲಯವು ಸೆಪ್ಟಂಬರ್ 10, 1980ರಂದು ಸ್ಥಾಪನೆಗೊಂಡಿದ್ದು ಉನ್ನತ ಶಿಕ್ಷಣ ಹಾಗೂ ಸಂಶೋಧನೆಯ ಪ್ರಗತಿ ಪಥದಲ್ಲಿದೆ. ರಾಷ್ಟ್ರೀಯ ಮೌಲ್ಯಮಾಪನ ಮತ್ತು ಶ್ರೇಯಾಂಕ ಮಂಡಲಿ (ನ್ಯಾಕ್) ಯಿಂದ 'ಎ' ಗ್ರೇಡ್ ಪಡೆದಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ವಿವಿಧ ಧ್ಯೇಯೋದೇಶಗಳ 22 ಅಧ್ಯಯನ ಪೀಠ/ಕೇಂದ್ರಗಳಿವೆ.

# ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ

ಬ್ರಹ್ಮಶ್ರೀ ನಾರಾಯಣಗುರುಗಳು ಹತ್ತೊಂಬತ್ತನೆಯ ಶತಮಾನದ ಕೇರಳದ ಮಹಾನ್ ಸಂತ, ಹಾಗೂ ಸಮಾಜ ಸುಧಾರಕರು ಅದ್ವೈತ ಪ್ರತಿಪಾದನೆ, 'ಮಾನವರೆಲ್ಲ ಒಂದೇ ಜಾತಿ, ಒಂದೇ ಮತ, ಎಲ್ಲರಿಗೂ ದೇವರೊಬ್ಬನೇ' ಎನ್ನುವ ಸರಳ ಸಂದೇಶಗಳೊಂದಿಗೆ ಕೇರಳ, ತಮಿಳುನಾಡು ಮಾತ್ರವಲ್ಲದೇ ಕರ್ನಾಟಕ ಕರಾವಳಿ ಜಿಲ್ಲೆಗಳನ್ನೂ ಪ್ರಭಾವಿಸಿ ಸಾಮಾಜಿಕ ಪರಿವರ್ತನೆ ಸಾಧಿಸಿದವರು. ದಾರ್ಶನಿಕತೆ, ಪ್ರಖರ ಚಿಂತನೆ, ಪಾಂಡಿತ್ಯದ ಅವರ ಸರಳ ಉದ್ಬೋಧಕ ಕೃತಿಗಳು ಸಮಾಜ ಸುಧಾರಣಾ ಕಾರ್ಯಗಳು ಹಿಂದುಳಿದ ಸಮಾಜದ ಆತ್ಮಸ್ಥೈರ್ಯ ಮತ್ತು ಸಂಘರ್ಷರಹಿತ ಸಮಾಜ ನಿರ್ಮಾಣಕ್ಕಾಗಿ ಸಮಕಾಲೀನವಾಗಿಯೂ ಅತ್ಯಂತ ಪ್ರಸ್ತುತವಾಗಿವೆ. ಇಂತಹ ಮಹೋನ್ನತದ ವ್ಯಕ್ತಿತ್ವದ ಬ್ರಹ್ಮಶ್ರೀ ನಾರಾಯಣಗುರುಗಳ ಕೃತಿಗಳು, ಕಾರ್ಯ ವಿಧಾನ, ಸಾಮಾಜಿಕ ಸುಧಾರಣಾ ತತ್ವಗಳನ್ನು ಇಂದಿನ ಮತ್ತು ಮುಂದಿನ ತಲೆಮಾರಿಗೆ ವಿಸ್ತರಿಸುವ ಸದುದ್ದೇಶದಿಂದ **ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ** ಸ್ಥಾಪನೆಗೊಂಡಿದೆ.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠವನ್ನು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ದಿನಾಂಕ 19.01.2017ರಂದು ಉದ್ಘಾಟಿಸಿರುತ್ತಾರೆ ಕರ್ನಾಟಕ ಸರ್ಕಾರವು ಈ ಪೀಠಕ್ಕೆ ಪ್ರಾರಂಭಿಕವಾಗಿ ರೂ. ಒಂದು ಕೋಟಿ ಮೂಲ ನಿಧಿಯನ್ನು ಒದಗಿಸಿರುತ್ತದೆ. ಪೀಠದ ನಿರ್ದೇಶಕರಾಗಿ ಲೇಖಕ, ಸಂಶೋಧಕ ಶ್ರೀ ಮುದ್ದು ಮೂಡುಬೆಳ್ಳೆ ನಿಯುಕ್ತಿಗೊಂಡು ಸಲಹಾ ಸಮಿತಿ ಶಿಫಾರಸು ಮೇರೆಗೆ ಪೀಠದ ಕಾರ್ಯ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದ್ದಾರೆ.

## ಪೀಠದ ಧ್ಯೇಯ, ಉದ್ದೇಶಗಳು:

1) ಶ್ರೀ ನಾರಾಯಣಗುರುಗಳ ಕುರಿತು ಅಧ್ಯಯನಕ್ಕೆ ಅನುಕೂಲವಾಗುವಂತೆ, ಈವರೆಗೆ ವಿವಿಧ ಭಾಷೆಗಳಲ್ಲಿ ಪ್ರಕಟವಾಗಿರುವ ಅಧ್ಯಯನ ಕೃತಿಗಳನ್ನು ದಾನ ಮತ್ತು ಖರೀದಿ ಮೂಲಕ ಸಂಗ್ರಹಿಸಿ ಸುಸಜ್ಜಿತ ಗ್ರಂಥಾಲಯ ಸ್ಥಾಪನೆ (ಈ ಕಾರ್ಯ ಈಗಾಗಲೇ ಆರಂಭವಾಗಿದೆ)
2) ಗುರುಗಳ ಕುರಿತಾದ ಆಡಿಯೋ,ವೀಡಿಯೋ ಧ್ವನಿಸುರುಳಿಗಳು, ಸಾಕ್ಷ್ಯಚಿತ್ರಗಳು, ಚಲನಚಿತ್ರ ಪ್ರತಿಗಳನ್ನು ಸಂಗ್ರಹಿಸಿ ಸುವ್ಯವಸ್ಥಿತ ಪತ್ರಾಗಾರ (ಆರ್ಕೈವ್) ನಿರ್ಮಿಸುವುದು.
3) ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಾಗೂ ಸಂಯೋಜಿತ ವಿದ್ಯಾಲಯಗಳಲ್ಲಿ ವಿವಿಧ ನಿಕಾಯಗಳ ಪ್ರಾಧ್ಯಾಪಕರ ನೆರವು ಪಡೆದು ಶ್ರೀ ನಾರಾಯಣಗುರುಗಳ ಬಹುಮುಖೀ ಧಾರ್ಮಿಕ, ಸಾಮಾಜಿಕ ಚಳುವಳಿಗಳು ಮತ್ತು ಅದರಿಂದುಂಟಾದ ಸಾಮಾಜಿಕ ಪ್ರಗತಿ ಕುರಿತಾಗಿ ತಜ್ಞರನ್ನು ಆಹ್ವಾನಿಸಿ ಸಂವಾದ, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು.
4) ಬ್ರಹ್ಮಶ್ರೀ ನಾರಾಯಣಗುರುಗಳ ಕುರಿತಾಗಿ ಪಿ.ಹೆಚ್.ಡಿ. ಅಧ್ಯಯನ ಮತ್ತಿತರ ಸಾಧನೆ ಮಾಡಿರುವವರನ್ನು ಗುರುತಿಸಿ ಗೌರವಿಸುವುದು.

5) ಶ್ರೀ ನಾರಾಯಣಗುರುಗಳ ಕುರಿತಾಗಿ ದೀರ್ಘಕಾಲದಿಂದ ಸಮಾಜಮುಖಿಯಾಗಿ ಅಧ್ಯಯನ ಮಾಡಿದವರು, ಗುರುಗಳ ತತ್ವ ಪ್ರಚಾರಕರು, ಗುರುಸಂದೇಶಗಳ ನೆರಳಲ್ಲಿ ಸಮಾಜಕಾರ್ಯ ಮಾಡುತ್ತಿರುವವರನ್ನು ಗುರುತಿಸಿ ಅಧ್ಯಯನ ಪೀಠಕ್ಕೆ ಸಹಕಾರ ಕೋರುವುದು.
6) ಮಾನವ ಸೋದರತೆ ಮತ್ತು ಅಶಕ್ತರ, ಶೋಷಿತರ ಉದ್ಧಾರಕ್ಕಾಗಿ ದುಡಿದ ಸಮಾಂತರ ಸಮಾಜ ಸುಧಾರಕರು ಉದಾ: ಗಾಂಧಿ,ಬುದ್ಧ,ಬಸವಣ್ಣ,ಕನಕದಾಸ,ಕಬೀರ,ಅಂಬೇಡ್ಕರ್ ಮುಂತಾದವರ ಹಾಗೂ ಶ್ರೀ ನಾರಾಯಣಗುರುಗಳ ಕುರಿತ ತೌಲನಿಕ ಅಧ್ಯಯನ, ವಿಚಾರವಿಮರ್ಶೆ, ಪ್ರಸಾರ ಕುರಿತು ಯೋಜನೆ ಹಮ್ಮಿಕೊಳ್ಳುವುದು.
7) ನಾರಾಯಣಗುರುಗಳು ಸ್ಥಾಪಿಸಿದ ಸಂಘಟನಾ ಸಂಸ್ಥೆ, ಧಾರ್ಮಿಕ – ಶೈಕ್ಷಣಿಕ ಕೇಂದ್ರಗಳು ಮತ್ತಿತರ ಕೇರಳದ ಸ್ಥಳಗಳನ್ನು ಸಂದರ್ಶಿಸಿ ಮಾಹಿತಿ ಸಂಗ್ರಹ, ಅಧ್ಯಯನ, ದಾಖಲೀಕರಣ ನಡೆಸುವುದು.
8) ನಾರಾಯಣಗುರುಗಳ ಹಲವು ವಿಧದ ಸುಧಾರಣಾ ಚಳುವಳಿ, ತತ್ವ ಸಂದೇಶ, ಸಾಧನೆಗಳ ಕುರಿತು ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಿ ಅಲ್ಲಿ ಮಂಡಿಸುವ ಪ್ರಬಂಧಗಳನ್ನು ಭಾಷಾವಾರಾಗಿ ಪ್ರಕಟಿಸುವ ಯೋಜನೆ ಕೈಗೆತ್ತಿಕೊಳ್ಳುವುದು.
9) ಪೀಠದ ಕಛೇರಿಯು ಈಗ ತಾತ್ಕಾಲಿಕವಾಗಿ ವಿಶ್ವವಿದ್ಯಾನಿಲಯದ ಆಡಳಿತ ಸೌಧದಲ್ಲಿದೆ. ಶ್ರೀ ನಾರಾಯಣಗುರು ಪೀಠಕ್ಕೆ ಪ್ರತ್ಯೇಕ ಕಟ್ಟಡದ ನಿರ್ಮಾಣದ ಅವಶ್ಯಕತೆ ಇದೆ. ಇದಕ್ಕಾಗಿ ಪ್ರಯತ್ನಿಸಿ ದಾನಿಗಳನ್ನು ವಿನಂತಿಸುವುದು. ಮುಂದೆ ನಿರ್ಮಾಣಗೊಳ್ಳುವ ಕಟ್ಟಡದಲ್ಲಿ ಅಧ್ಯಯನ ಕೊಠಡಿ, ಸುಸಜ್ಜಿತ ಥೀಮ್ ಪಾರ್ಕ್, ಆಡಿಯೋ–ವೀಡಿಯೋ, ಧ್ವನಿ ಬೆಳಕು ಮುಂತಾದ ವ್ಯವಸ್ಥೆಗಳಿಗೆ ಪ್ರಯತ್ನಿಸುವುದು.

ಹಾಗೂ ಅಧ್ಯಯನ ಪೀಠದ ನಿಯಮಾವಳಿ ಚೌಕಟ್ಟಿನಲ್ಲಿ ಬರುವ ಇತರ ವಿಷಯಗಳು.

## ಪೀಠದ ಚಟುವಟಿಕೆಗಳು:

★ ಅಧ್ಯಯನ ಪೀಠದ ಉದ್ಘಾಟನೆ: ದಿನಾಂಕ 19.01.2017ರಂದು ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿ ಶ್ರೀ. ಸಿದ್ಧರಾಮಯ್ಯನವರಿಂದ.

★ ಪೀಠದ ಗುರುವಿನ ಅರಿವು ವಿಶೇಷ ಉಪನ್ಯಾಸ ಮಾಲಿಕೆ ಕಾರ್ಯಕ್ರಮದ ಉದ್ಘಾಟನೆ 06.03.2017. ಮಂಗಳಗಂಗೋತ್ರಿಯ ಎಂ.ಬಿ.ಎ. ಸಭಾಂಗಣದಲ್ಲಿ ನೆರವೇರಿತು. ರಾಜ್ಯಸಭಾ ಸದಸ್ಯ ಬಿ.ಕೆ. ಹರಿಪ್ರಸಾದ್ ಆಗಮಿಸಿ ದಿಕ್ಸೂಚಿ ಭಾಷಣ ಮಾಡಿದರು. ಕೇರಳ ವಿಶ್ವವಿದ್ಯಾನಿಲಯದ ಡಾ. ಎನ್. ಸುರೇಶ್ ಅವರು *$19^{th}$ Century Kerala and the Advent of Narayana Guru* ಎಂಬ ವಿಷಯವಾಗಿ ವಿಶೇಷ ಉಪನ್ಯಾಸ ನೀಡಿದರು.

★ ಮಾಲಿಕೆಯ ಎರಡು ಮತ್ತು ಮೂರನೇ ಉಪನ್ಯಾಸಗಳು ಮಂಗಳೂರಿನ ಉರ್ವಸ್ಟೋರ್ ಮತ್ತು ಬಲ್ಮಠದಲ್ಲಿ ಜರಗಿದವು. ಈ ಮಾಲಿಕೆಯ ಎರಡನೇ ಹಂತದ ಕಾರ್ಯಕ್ರಮಗಳ ಉದ್ಘಾಟನೆ. ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ 2017–18ನೇ ಸಾಲಿನ ದ್ವಿತೀಯ ಹಂತದ ಉಪನ್ಯಾಸ ಮಾಲಿಕೆಯ ಉದ್ಘಾಟನೆ ಬಂಟ್ವಾಳ ಸಿದ್ಧಕಟ್ಟೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚೆಗೆ ಜರಗಿತು. ಕಾಲೇಜು ಶಿಕ್ಷಣ ಇಲಾಖೆಯ ಜಂಟಿನಿರ್ದೇಶಕ ಡಾ. ಉದಯಶಂಕರ್ ಅವರು ಉಪನ್ಯಾಸ ಮಾಲಿಕೆಯನ್ನು ಉದ್ಘಾಟಿಸಿ ಮಾತನಾಡುತ್ತಾ, "ನಾರಾಯಣಗುರುಗಳಂತಹ ಮಹಾನ್ ವ್ಯಕ್ತಿತ್ವದ ಸಮಾಜಮುಖಿ ಸಾಧನೆಗಳ ಪರಿಚಯ ಇನ್ನಷ್ಟು ಹೆಚ್ಚು ಹೆಚ್ಚಾಗಿ ಆಗಬೇಕಾಗಿದೆ. ವಿದ್ಯಾರ್ಥಿಗಳು, ಯುವಜನತೆ ಅದರ ಪ್ರಯೋಜನ ಪಡೆದುಕೊಳ್ಳಬೇಕು" ಎಂದು ಹಾರೈಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ಎನ್. ಭಟ್ ಅಧ್ಯಕ್ಷತೆ ವಹಿಸಿದ್ದರು. ಅಧ್ಯಯನ ಪೀಠದ ನಿರ್ದೇಶಕ ಮುದ್ದು ಮೂಡುಬೆಳ್ಳೆ ಪ್ರಾಸ್ತವಿಕವಾಗಿ ಮಾತನಾಡಿದರು. ನಿವೃತ್ತ ಪ್ರಾಧ್ಯಾಪಕ ಶ್ರೀ ಬೈಕಾಡಿ ಜನಾರ್ಧನ ಆಚಾರ್ ನಾರಾಯಣಗುರುಗಳ ಜೀವನ ಸಾಧನೆಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಈ ಮಾಲಿಕೆಯ ಇತರ ಉಪನ್ಯಾಸಗಳನ್ನು ಸರ್ವಶ್ರೀ ಬಾಬು ಶಿವಪೂಜಾರಿ, ಉದಯಕುಮಾರ ಹಬ್ಬು, ಟಿ. ಎನ್ ಖಂಡಿಗೆ, ಸಚಿತಾ ನಂದಗೋಪಾಲ್, ನೆಕ್ಕಿತಪುಣಿ ಗೋಪಾಲಕೃಷ್ಣ, ಮೋಹನ ಉಪ್ಪಳ ಇವರಿಂದ ಉಡುಪಿ ಹಾಗೂ ದ.ಕ. ಜಿಲ್ಲೆಗಳ ವಿವಿಧ ಕಾಲೇಜುಗಳಲ್ಲಿ ನಡೆಸಿಕೊಟ್ಟರು.

## 2017–18 ನೇ ಸಾಲಿನ ಕಾರ್ಯ ಚಟುವಟಿಕೆಗಳ ವರದಿ

ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ನೆಲ ಅಂತಸ್ತಿನ ಕೊಠಡಿಯಲ್ಲಿ ಕಛೇರಿ ಹೊಂದಿರುವ ಶ್ರೀ ನಾರಾಯಣಗುರು ಅಧ್ಯಯನ ಪೀಠವು ಸ್ಥಾಪನೆಯಾದ ಒಂದು ವರ್ಷದ ಅವಧಿಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಹಾಗೂ ಸಂಯೋಜಿತ ಕಾಲೇಜುಗಳ ಮತ್ತು ಖಾಸಗಿಯವರ ಸಹಯೋಗದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿ ವೃಂದಕ್ಕಾಗಿ 'ನಾರಾಯಣಗುರು ಜೀವನ, ತತ್ವ, ಸಂದೇಶ ಪ್ರಸರಣ' ಉಪನ್ಯಾಸ ಮಾಲಿಕೆಯನ್ನು ಆರಂಭಿಸಿ, ಗುರು ಜೀವನ, ಸಾಧನೆಯ ವಿವಿಧ ವಿಷಯಗಳಲ್ಲಿ ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ಕಾಲೇಜುಗಳಲ್ಲಿ ಒಟ್ಟು 10 (ಹತ್ತು) ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿದೆ.

- ಶ್ರೀ ನಾರಾಯಣಗುರು ಜಯಂತಿ ಸಮಾರಂಭವನ್ನು ದಿನಾಂಕ 06.09.2017ರಂದು ವಿಶ್ವವಿದ್ಯಾನಿಲಯದ ಸೆನೆಟ್ ಹಾಲ್‌ನಲ್ಲಿ ಏರ್ಪಡಿಸಲಾಯಿತು.
- ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ನಾರಾಯಣ ಗುರುಗಳ ಕುರಿತು ಪ್ರಬಂಧ ಸ್ಪರ್ಧೆ ಮತ್ತು ಗೀತರಚನಾ ಸ್ಪರ್ಧೆ ಏರ್ಪಡಿಸಿ ಬಹುಮಾನ ನೀಡಲಾಯಿತು.
- ಅಧ್ಯಯನ ಪೀಠದ ವತಿಯಿಂದ ದಿನಾಂಕ: 06.09.2017ರಂದು ನಾರಾಯಣ ಗುರುಗಳ ಕುರಿತು ಕಥಾಕೀರ್ತನ ಕಾರ್ಯಕ್ರಮವನ್ನು ವಿದ್ವಾನ್ ಪುಷ್ಕಳ ಕುಮಾರ್ ತೋನ್ಸೆ ತಂಡದಿಂದ ರೂಪಿಸಿ, ಕೊಲ್ಯದ ಶ್ರೀ ನಾರಾಯಣ ಗುರು ಮಂದಿರದಲ್ಲಿ ಏರ್ಪಡಿಸಲಾಯಿತು.
- ಶ್ರೀ ನಾರಾಯಣ ಗುರುಗಳ ಕುರಿತಾಗಿ ಅಧ್ಯಯನ ಮಾಡಿದ ಮತ್ತು ಪಿಎಚ್.ಡಿ ಪಡೆದ ಮೂವರನ್ನು ಆಹ್ವಾನಿಸಿ ಸಾಂಕೇತಿಕವಾಗಿ ಗೌರವಿಸಿದೆ.
- ದಿನಾಂಕ 17.02.2018ರಂದು ವಿ.ವಿ ಸಂಯೋಜಿತ ಉಡುಪಿ, ದ.ಕ, ಮತ್ತು ಕೊಡಗು ಜಿಲ್ಲಾ ಕಾಲೇಜುಗಳ ವ್ಯಾಪ್ತಿಯ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗಾಗಿ ಮಂಗಳೂರು ಪುರಭವನದಲ್ಲಿ 'ಗುರು ತತ್ವ ಅನುಷ್ಠಾನ ನಿನ್ನೆ–ಇಂದು–ನಾಳೆ' ಎಂಬ ವಿಷಯವಾಗಿ ವಿದ್ಯಾರ್ಥಿ ಶಿಬಿರವನ್ನು ಏರ್ಪಡಿಸಿ, ಸುಮಾರು 80 ಕಾಲೇಜುಗಳ 600 ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಕ್ರಿಯ ಭಾಗವಹಿಸುವಿಕೆಯ ಯಶಸ್ಸನ್ನು ಕಂಡಿದೆ.
- ಪೀಠದ ವತಿಯಿಂದ ಈಗಾಗಲೇ ಶ್ರೀ ನಾರಾಯಣ ಗುರುಗಳ ಕುರಿತು 'ಪರಿವರ್ತನ ಪಥಶಿಲ್ಪಿ ಶ್ರೀ ನಾರಾಯಣ ಗುರುಗಳು' ಎನ್ನುವ ಒಂದು ಕೃತಿಯನ್ನು 2017ರಲ್ಲಿ ಪ್ರಕಟಿಸಲಾಗಿದೆ.
- ಅದರ ವಿಸ್ತೃತ ರೂಪವು ಶ್ರೀ ಆರ್.ಕೆ. ಬಂಗೇರರ ಸಹಯೋಗದಲ್ಲಿ, ಬಿ.ಜೆ.ಮಸ್ಕತ್ (ಬಿಲ್ಲವ ಜವನ್ನೆರ್ ಮಸ್ಕತ್)ಇವರ ಪ್ರಾಯೋಜಕತ್ವದಲ್ಲಿ ಇತ್ತೀಚೆಗೆ 'ಶ್ರೀ ಗುರು ನಾರಾಯಣ' ಪುಸ್ತಕ ಸಿದ್ಧಗೊಂಡಿದೆ.
- ಶ್ರೀ ನಾರಾಯಣ ಗುರುಗಳ ಮೂಲಕ್ಷೇತ್ರಗಳಾದ ಕೇರಳದ ಶಿವಗಿರಿ, ಚೆಂಬಳಂತಿ, ಅರವೀಪುರಂ, ಕುನ್ನಂಪಾರ ಮತ್ತು ತಮಿಳುನಾಡಿನ ಮರುತ್ವಮಲೆಗಳಿಗೆ ದಿನಾಂಕ 18–19 ಮಾರ್ಚ್ 2018ರಂದು ಪೀಠದ ವತಿಯಿಂದ ಮೂರು ಮಂದಿಯ ಅಧ್ಯಯನ ತಂಡವು ಅಧ್ಯಯನ ಪ್ರವಾಸ ಕೈಗೊಂಡು ಹಲವು ಸ್ಥಳ ಮತ್ತು ವ್ಯಕ್ತಿಗಳನ್ನು ಸಂದರ್ಶಿಸಿ ಮಾಹಿತಿಗಳ ವೀಡಿಯೋ ರೆಕಾರ್ಡಿಂಗ್ ಮಾಡಿಕೊಂಡು ಬರಲಾಗಿದೆ.
- ಪೀಠದ ಸಂಕ್ಷಿಪ್ತ ಪರಿಚಯ ಪುಸ್ತಕ (ಕರಡು) ಸಿದ್ಧಪಡಿಸಲಾಗಿದೆ.

## 2018–19 ನೇ ಸಾಲಿನ ಕಾರ್ಯ ಚಟುವಟಿಕೆಗಳ ವರದಿ

ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ನೆಲ ಅಂತಸ್ತಿನ ಕೊಠಡಿಯಲ್ಲಿ ಕಛೇರಿ ಹೊಂದಿರುವ ಶ್ರೀ ನಾರಾಯಣಗುರು ಅಧ್ಯಯನ ಪೀಠವು ಸ್ಥಾಪನೆಯ 2 ವರ್ಷಗಳನ್ನು ಯಶಸ್ವಿಗೊಳಿಸಿ 3ನೇ ವರ್ಷದಲ್ಲಿದೆ. ಕಳೆದ ವರ್ಷದ ಅವಧಿಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಹಾಗೂ ಸಂಯೋಜಿತ ಕಾಲೇಜುಗಳ ಮತ್ತು ಖಾಸಗಿಯವರ ಸಹಯೋಗದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿ ವೃಂದಕ್ಕಾಗಿ **'ಗುರುವಿನ ಅರಿವು'– 'ನಾರಾಯಣಗುರು ಜೀವನ, ತತ್ವ, ಸಂದೇಶ ಪ್ರಸರಣ' ಉಪನ್ಯಾಸ ಮಾಲಿಕೆ**ಯನ್ನು ಆರಂಭಿಸಿ, ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ಕಾಲೇಜುಗಳಲ್ಲಿ, ಅವಿಭಜಿತ ದ.ಕ. ಜಿಲ್ಲೆ ಹಾಗೂ ಹೊರನಾಡು ಮುಂಬಯಿಯಲ್ಲಿ ಒಟ್ಟು 08 (ಎಂಟು) ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿದೆ.

- ಶ್ರೀ ನಾರಾಯಣಗುರು ಜಯಂತಿ ಸಮಾರಂಭವನ್ನು ದಿನಾಂಕ 30.08.2018ರಂದು ವಿಶ್ವವಿದ್ಯಾನಿಲಯದ ಮಂಗಳಾ ಸಭಾಂಗಣದಲ್ಲಿ ಏರ್ಪಡಿಸಲಾಯಿತು. ಕೇರಳ ಶಿವಗಿರಿ ಸ್ವಾಮಿ ಶ್ರೀ ಸತ್ಯಾನಂದ ತೀರ್ಥರು ಆಗಮಿಸಿ ಆಶೀರ್ವಚನ ಹಾಗೂ ವಿಶೇಷ ಉಪನ್ಯಾಸ ನೀಡಿದರು. ಕರ್ನಾಟಕ ವಿಧಾನಪರಿಷತ್ ಪ್ರತಿಪಕ್ಷ ನಾಯಕ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಶ್ರೀ ರಾಜಶೇಖರ ಕೋಟ್ಯಾನ್ ಅತಿಥಿಗಳಾಗಿ ಪಾಲ್ಗೊಂಡಿದ್ದರು.
- ಕುಳಾಯಿಯ ಬ್ರಹ್ಮಶ್ರೀ ನಾರಾಯಣಗುರು ಯಕ್ಷಗಾನ ಮಂಡಳಿಯವರಿಂದ 30.08.2018ರಂದು "ಬ್ರಹ್ಮಶ್ರೀ ನಾರಾಯಣಗುರು ಮಹಾತ್ಮೆ" ಎಂಬ ಕಾಲಮಿತಿಯ ಯಕ್ಷಗಾನ ಬಯಲಾಟವನ್ನು ಭಾಗವತ ಡಾ. ದಿನಕರ ಪಚ್ಚನಾಡಿ ಅವರ ಸಂಯೋಜನೆಯಲ್ಲಿ ನಡೆಸಲಾಯಿತು.
- ದಿನಾಂಕ 14.02.2019ರಂದು ಮಂಗಳೂರು ವಿಶ್ವವಿದ್ಯಾನಿಲಯ ಸಂಯೋಜಿತ ಕಾಲೇಜುಗಳ ವ್ಯಾಪ್ತಿಯ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗಾಗಿ ಮಂಗಳೂರು ಪುರಭವನದಲ್ಲಿ 'ಗುರು ತತ್ವ ಅನುಷ್ಠಾನ ನಿನ್ನೆ–ಇಂದು–ನಾಳೆ' ಎಂಬ ವಿಷಯವಾಗಿ ವಿದ್ಯಾರ್ಥಿ ಶಿಬಿರವನ್ನು ಏರ್ಪಡಿಸಿ, ಸುಮಾರು 45 ಕಾಲೇಜುಗಳ 490 ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಕ್ರಿಯ ಭಾಗವಹಿಸುವಿಕೆಯ ಯಶಸ್ಸನ್ನು ಕಂಡಿದೆ.

---

## 2019–20 ನೇ ಸಾಲಿನ ಕಾರ್ಯ ಚಟುವಟಿಕೆಗಳ ವರದಿ

I. ಅ) ಗುರುವಿನ ಅರಿವು ನಾರಾಯಣಗುರು ಜೀವನ ತತ್ವಸಂದೇಶ ಪ್ರಸರಣದ ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ಮಂಗಳೂರು ವಿ.ವಿ., ಬೆಂಗಳೂರು, ವಿಜಯಪುರ, ಬೆಳಗಾಂ, ಬೆಳ್ತಂಗಡಿ, ಮೂಡುಬಿದಿರೆ, ಕಾರ್ಕಳ, ಸುಳ್ಯ, ಮಡಂತ್ಯಾರುಗಳಲ್ಲಿ – ಒಂಬತ್ತು ಉಪನ್ಯಾಸ ಕಾರ್ಯಕ್ರಮಗಳನ್ನು ಜರಗಿಸಲಾಯಿತು.

II. **ವಿಚಾರ ಸಂಕಿರಣ–ವಿಚಾರ ಗೋಷ್ಠಿಗಳು:**

1. 09.04.2019 ನಾರಾಯಣಗುರು ಪರಂಪರೆಯ ಬಲ್ಯೊಟ್ಟು–ಹೊಸ್ಮಾರಿನಲ್ಲಿ ಜರಗಿದ ಶೈಕ್ಷಣಿಕ–ಧಾರ್ಮಿಕ ಸಮಾರಂಭದಲ್ಲಿ ಪೀಠದ ನಿರ್ದೇಶಕರು ಪಾಲ್ಗೊಂಡರು.
2. 21.07.2019 ಬೆಂಗಳೂರಿನ ಬನ್ನೇರುಘಟ್ಟದಲ್ಲಿ ಅಲ್ಲಿನ ಬಿಲ್ಲವ ಎಸೋಶಿಯೇಶನ್ ಆಶ್ರಯದಲ್ಲಿ ಈ ಅಧ್ಯಯನ ಪೀಠದ ಉಪನ್ಯಾಸ ಮಾಲಿಕೆಯ 2019–20ನೆ ಸಾಲಿನ ಮೊದಲ ಉಪನ್ಯಾಸ 'ಸಾಮಾಜಿಕ–ಶೈಕ್ಷಣಿಕ ಅಭಿವೃದ್ಧಿಗೆ ನಾರಾಯಣ ಗುರುಗಳ ಕೊಡುಗೆ' ವಿಷಯವಾಗಿ ಪೀಠದ ನಿರ್ದೇಶಕರಿಂದ ವಿಶೇಷ ಉಪನ್ಯಾಸ ಜರಗಿತು.
3. 27.08.2019 ಅಧ್ಯಯನ ಪೀಠದ ಈ ಸಾಲಿನ ಸಲಹಾಸಮಿತಿ ಸಭೆ ಜರಗಿತು.
4. 04.09.2019 ಗುರುವಿನ ಅರಿವು–ಉಪನ್ಯಾಸ ಮಾಲಿಕೆ ಉದ್ಘಾಟನೆ ಹಳೆ ಸೆನೆಟ್ ಸಭಾಂಗಣದಲ್ಲಿ ಜರಗಿತು. ಹೈದರಾಬಾದಿನ ನಿವೃತ್ತ ಕಮಿಶನರ್ ಡಾ. ವೈ. ಸತ್ಯನಾರಾಯಣ ಇವರು Social relevance of Narayana Guru ವಿಷಯವಾಗಿ ಪ್ರಾತ್ಯಕ್ಷಿಕೆ–ಉಪನ್ಯಾಸ ನೀಡಿದರು. ಕುಲಪತಿಯವರು ಅಧ್ಯಕ್ಷತೆ ವಹಿಸಿದ್ದರು.

5. 08.09.2019 ಬೆಳಗಾವಿಯಲ್ಲಿ–ಬಿಲ್ಲವಸಂಘ ಬೆಳಗಾವಿ ಇವರ ಸಹಯೋಗದಲ್ಲಿ ವಿಶೇಷ ಉಪನ್ಯಾಸ–'ಬಿಲ್ಲವ ಸಮುದಾಯದ ಏಳಿಗೆಗೆ ನಾರಾಯಣಗುರು ಕೊಡುಗೆ' ವಿಷಯವಾಗಿ ವಿಶೇಷ ಉಪನ್ಯಾಸ ಮುಂಬಯಿಯ ಸಾಹಿತಿ, ಸಂಶೋಧಕ ಶ್ರೀ ಬಾಬು ಶಿವ ಪೂಜಾರಿ ಅವರಿಂದ.
6. 12.09.2019 ಬೆಳ್ತಂಗಡಿ ಶ್ರೀ ಗುರುದೇವ ಕಾಲೇಜು– ಉಪನ್ಯಾಸ ಡಾ. ಪೂವಪ್ಪ ಕಣಿಯೂರು ಅವರಿಂದ 'ನಾರಾಯಣ ಗುರುಗಳ ಶೈಕ್ಷಣಿಕ ಪುನರುತ್ಥಾನ' – ವಿಷಯವಾಗಿ ಉಪನ್ಯಾಸ ಕಾರ್ಯಕ್ರಮ ಜರಗಿತು.
7. ದಿನಾಂಕ 18.12.2019, 19.12.2019, 03.01.2020 ಎನ್.ಎಂ. ಕಾಲೇಜು ಸುಳ್ಯ, ಪುಂಜಾಲಕಟ್ಟೆ ಕಾಲೇಜು ಮತ್ತು ಮೂಡುಬಿದ್ರೆ ಮಹಾವೀರ ಕಾಲೇಜುಗಳಲ್ಲಿ ಗುರುವಿನ ಅರಿವು ಮಾಲಿಕೆಯಲ್ಲಿ ಕಿರು ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು.
8. 06.08.2020 ಮತ್ತು 08.02.2020 ರಂದು ಮೂಡುಬಿದ್ರೆ ಆಳ್ವಾಸ್ ಮತ್ತು ಕಾರ್ಕಳ ಭುವನೇಂದ್ರ ಕಾಲೇಜುಗಳಲ್ಲಿ ವಿಶೇಷ ಉಪನ್ಯಾಸ ಏರ್ಪಡಿಸಲಾಯಿತು.
9. ಉತ್ತರ ಕರ್ನಾಟಕದ ವಿಜಯಪುರದಲ್ಲಿ ಅಲ್ಲಿನ ಚಾಣಕ್ಯ ಅಕಾಡೆಮಿಯ ಸಹಯೋಗದಲ್ಲಿ ಮಾನವ ಸೋದರತೆಯ ಹರಿಕಾರ ಬಸವಣ್ಣ ಮತ್ತು ನಾರಾಯಣಗುರು ತೌಲನಿಕತೆ ಕುರಿತು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ದಿನಾಂಕ 07.09.2019ರಂದು ಏರ್ಪಡಿಸಲಾಗಿತ್ತು. ಐವರು ವಿಷಯ ತಜ್ಞರಿಂದ ಉಪನ್ಯಾಸಗಳು, ಶ್ರೀ ನಾರಾಯಣಗುರು ಜೀವನ ಕಥನದ ನೃತ್ಯನಾಟಕ ಪ್ರದರ್ಶನ ಸುಮಾರು 1000 ಮಂದಿ ಯುವ ಪ್ರೇಕ್ಷಕರ ಸಮ್ಮುಖದಲ್ಲಿ ಯಶಸ್ವಿಯಾಗಿ ಜರಗಿಸಲಾಯಿತು.
10. ದಿನಾಂಕ 15.09.2019ರಂದು ವಿಶ್ವವಿದ್ಯಾನಿಲಯ ಕಾಲೇಜು, ಹಂಪನಕಟ್ಟೆ ಇಲ್ಲಿ ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ಹಾಗೂ ತುಳು ಪೀಠಗಳ ಸಹಯೋಗದಲ್ಲಿ 'ಗುರುಕುಲೆ ಗುರು ನಾರಾಯಣ' ಎನ್ನುವ ಮಹಾಕಾವ್ಯ ಕುರಿತು ವಿಚಾರಗೋಷ್ಠಿ, ಸಾಹಿತ್ಯ ಸಂವಾದ ಕಾರ್ಯಕ್ರಮ ನಡೆಸಲಾಯಿತು.
11. ದಿನಾಂಕ 18.01.2020ರಂದು ಶಿವಮೊಗ್ಗದಲ್ಲಿ ಕುವೆಂಪು ವಿ.ವಿ. ಸಹ್ಯಾದ್ರಿ ಕಾಲೇಜು, ಶಿವಮೊಗ್ಗ ಮತ್ತು ಈ ಅಧ್ಯಯನ ಪೀಠದ ಸಹಯೋಗದಲ್ಲಿ ವಿದ್ಯಾರ್ಥಿಗಳಿಗಾಗಿ ಒಂದು ದಿನದ (ಅಂತರ ವಿ.ವಿ.) ರಾಜ್ಯಮಟ್ಟದ ವಿಚಾರ ಸಂಕಿರಣ ಏರ್ಪಡಿಸಲಾಯಿತು.
12. ದಿನಾಂಕ 05.12.2019 ರಿಂದ 11.12.2019ರ ವರೆಗೆ ಜ್ಞಾನಾಮೃತ, ಮಂಗಳೂರು ಇವರ ಸಹಯೋಗದಲ್ಲಿ ವಿದ್ವಾಂಸರಾದ ತೋನ್ಸೆ ಪುಷ್ಕಳಕುಮಾರ್ ಹಾಗೂ ಡಾ. ದಿನಕರ ಎಸ್. ಪಚ್ಚನಾಡಿ ಬಳಗದಿಂದ ಗುರು ಸಂದೇಶ: ವಾಚನ, ಗಾಯನ ಸಪ್ತಾಹವನ್ನು ದ.ಕ. ಹಾಗೂ ಉಡುಪಿ ಜಿಲ್ಲೆಯ ಆಯ್ದ 7 ನಾರಾಯಣಗುರು ಸಂಘಗಳ ಆಶ್ರಯದಲ್ಲಿ ಏರ್ಪಡಿಸಲಾಯಿತು.
13. ದಿನಾಂಕ 04.02.2020ರಂದು ರಾಜ್ಯೋತ್ಸವ ಪ್ರಶಸ್ತಿ ವಿಜೇತ ಯುವವಾಹಿನಿ ಈ ಸಂಘಟನೆಯ ಸಹಯೋಗದಲ್ಲಿ ಮಂಗಳೂರು ಪುರಭವನದಲ್ಲಿ ಕಾಲೇಜು ವಿದ್ಯಾರ್ಥಿಗಳಿಗಾಗಿ 'ಶ್ರೀ ಗುರು ಜೀವನಾಮೃತ' – ನಾರಾಯಣ ಗುರು ತತ್ವ ಸಂದೇಶ ಪರಿಚಯಿಸುವ ಒಂದು ದಿನದ ವಿಚಾರ ಸಂಕಿರಣ ಜರಗಿಸಲಾಯಿತು. ವಿವಿಧ ಕಾಲೇಜುಗಳ 350 ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ವಿದ್ಯಾರ್ಥಿಗಳು ಪ್ರಬಂಧ ಮಂಡನೆ ಮಾಡಿದರು.

## III. **ಗುರು ತತ್ವ ಸಂದೇಶ ಪ್ರಸರಣ ಕಿರು ಯೋಜನೆ:**

ಈ ಯೋಜನೆಯಲ್ಲಿ ಮಾಣಿ (13.10.2019), ಪಡುಬಿದ್ರಿ (20.10.2019, ಹಾಗೂ (21.10.2019) ಮೂಡುಬಿದ್ರೆ ಶ್ರೀ ನಾರಾಯಣಗುರು ಸಂಘಟನೆ ಮತ್ತು ಯುವವಾಹಿನಿ ಸಂಘಟನೆಗಳ ಸಹಭಾಗಿತ್ವದಲ್ಲಿ ನಾರಾಯಣಗುರು ಜೀವನ ಸಾಧನೆಗಳನ್ನು ಪರಿಚಯಿಸುವ ವಿಚಾರಗೋಷ್ಠಿಗಳನ್ನು ಸಹಯೋಗ ನೀಡಿ ನಡೆಸಲಾಯಿತು.

IV. ದಿನಾಂಕ 17.09.2019ರಂದು ಶ್ರೀ ನಾರಾಯಣಗುರು ಜಯಂತಿ ಸಂದರ್ಭದಲ್ಲಿ ಅವಿಭಜಿತ ದ.ಕ. ಜಿಲ್ಲೆಯ ಮಟ್ಟದ ವಿದ್ಯಾರ್ಥಿಗಳಿಗಾಗಿ ನಾರಾಯಣ ಗುರುಗಳ ವಿಷಯವಾಗಿ ಭಾಷಣ ಸ್ಪರ್ಧೆ ಏರ್ಪಡಿಸಿ 11 ಮಂದಿ ವಿಜೇತ ವಿದ್ಯಾರ್ಥಿಗಳಿಗೆ ನಗದು ಬಹುಮಾನಗಳನ್ನು ನೀಡಲಾಯಿತು.

V. ದಿನಾಂಕ 22.10.2019ರಂದು ಮಂಗಳೂರು ವಿ.ವಿ.ಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ 165ನೇ ಜಯಂತಿ ಸಮಾರಂಭವನ್ನು ಜರಗಿಸಲಾಯಿತು. ಧಾರ್ಮಿಕ ಸಮನ್ವಯ ಸ್ವರೂಪದ ನೆಲೆಯಲ್ಲಿ ಈ ಕಾರ್ಯಕ್ರಮದಲ್ಲಿ ಶಾಸಕರಾದ ಯು.ಟಿ. ಖಾದರ್, ಸುನಿಲ್‌ಕುಮಾರ್, ಶ್ರೀ ನವೀನ್‌ಚಂದ್ರ ಸುವರ್ಣ, ಬಲ್ಯೊಟ್ಟು ಗುರುಕೃಪಾ ಸೇವಾಶ್ರಮದ ಶ್ರೀ ವಿಖ್ಯಾತಾನಂದ ಸ್ವಾಮೀಜಿ ಮತ್ತಿತರರು ಪಾಲ್ಗೊಂಡರು.

VI. ಶ್ರೀ ಅರವಿಂದ ಚೊಕ್ಕಾಡಿ ಇವರ ನಿರ್ದೇಶನದಲ್ಲಿ ಮೊರಾರ್ಜಿ ದೇಸಾಯಿ ವಸತಿಶಾಲೆ ಮುಂಡಾಜೆ ಹಾಗೂ ಇಂದಿರಾಗಾಂಧಿ ವಸತಿಶಾಲೆ ಹೊಸಂಗಡಿ ಇಲ್ಲಿನ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲೂ ಪ್ರದರ್ಶಿಸಿ ಜನಮೆಚ್ಚುಗೆಗೆ ಪಾತ್ರವಾದ "ನಾರಾಯಣಗುರು ದರ್ಶನ"–ನೃತ್ಯನಾಟಕವನ್ನು ಪ್ರದರ್ಶಿಸಿದರು.

**ಪ್ರಕಟಣೆ:** 2017ರಲ್ಲಿ ಪೀಠದ ವತಿಯಿಂದ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ನಾರಾಯಣಗುರು ಜೀವನ ದರ್ಶನ ವಿಷಯವಾಗಿ ಏರ್ಪಡಿಸಿದ ಪ್ರಬಂಧ ಸ್ಪರ್ಧೆಯ ಆಯ್ದ ಪ್ರಬಂಧಗಳ ಸಂಕಲನವನ್ನು 2019ರ ಗುರುಜಯಂತಿ ಸಂದರ್ಭದಲ್ಲಿ ಪ್ರಕಟಿಸಿ ಬಿಡುಗಡೆಗೊಳಿಸಲಾಯಿತು.

**ಪೀಠದ 2019–20ರ ಚಟುವಟಿಕೆಗಳ ಇನ್ನಿತರ ವಿವರಗಳು:**

1. 04.09.2019 ಗುರುವಿನ ಅರಿವು–ಉಪನ್ಯಾಸ ಮಾಲಿಕೆ ಉದ್ಘಾಟನೆ ಹಳೆ ಸೆನೆಟ್ ಸಭಾಂಗಣದಲ್ಲಿ ಜರಗಿತು. ಹೈದರಾಬಾದಿನ ನಿವೃತ್ತ ಕಮಿಶನರ್ ಡಾ. ವೈ. ಸತ್ಯನಾರಾಯಣ ಇವರು Social relevance of Narayana Guru ವಿಷಯವಾಗಿ ಪ್ರಾತ್ಯಕ್ಷಿಕೆ–ಉಪನ್ಯಾಸ ನೀಡಿದರು. ಕುಲಪತಿಯವರು ಅಧ್ಯಕ್ಷತೆ ವಹಿಸಿದ್ದರು.
2. 08.09.2019 ಬೆಳಗಾವಿಯಲ್ಲಿ–ಬಿಲ್ಲವಸಂಘ ಬೆಳಗಾವಿ ಇವರ ಸಹಯೋಗದಲ್ಲಿ ವಿಶೇಷ ಉಪನ್ಯಾಸ–'ಬಿಲ್ಲವ ಸಮುದಾಯದ ಏಳಿಗೆಗೆ ನಾರಾಯಣಗುರು ಕೊಡುಗೆ' ವಿಷಯವಾಗಿ ಮುಂಬಯಿಯ ಸಾಹಿತಿ, ಸಂಶೋಧಕ ಶ್ರೀ ಬಾಬು ಶಿವ ಪೂಜಾರಿ ಇವರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಯಿತು.
3. 12.09.2019 ಬೆಳ್ತಂಗಡಿ ಶ್ರೀ ಗುರುದೇವ ಕಾಲೇಜಿನಲ್ಲಿಉಪನ್ಯಾಸ: ಡಾ. ಪೂವಪ್ಪ ಕಣಿಯೂರು ಅವರಿಂದ 'ನಾರಾಯಣ ಗುರುಗಳ ಶೈಕ್ಷಣಿಕ ಪುನರುತ್ಥಾನ' – ವಿಷಯವಾಗಿ ಉಪನ್ಯಾಸ ಕಾರ್ಯಕ್ರಮ ಜರಗಿತು.
4. ದಿನಾಂಕ 18.12.2019, 19.12.2019, 03.01.2020 ಎನ್.ಎಂ. ಕಾಲೇಜು ಸುಳ್ಯ, ಪುಂಜಾಲಕಟ್ಟೆ ಕಾಲೇಜು ಮತ್ತು ಮೂಡುಬಿದ್ರೆ ಮಹಾವೀರ ಕಾಲೇಜುಗಳಲ್ಲಿ ಗುರುವಿನ ಅರಿವು ಮಾಲಿಕೆಯಲ್ಲಿ ತಜ್ಞರಿಂದ ಕಿರು ಉಪನ್ಯಾಸಗಳು, ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು.
5. 06.08.2020 ಮತ್ತು 08.02.2020 ರಂದು ಮೂಡುಬಿದ್ರೆ ಆಳ್ವಾಸ್ ಮತ್ತು ಕಾರ್ಕಳ ಭುವನೇಂದ್ರ ಕಾಲೇಜುಗಳಲ್ಲಿ ಅರವಿಂದ ಚೊಕ್ಕಾಡಿ ಹಾಗೂ ಡಾ. ಕೃಷ್ಣರಾಜ ಕರಬ ಇವರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಯಿತು.
6. ದಿನಾಂಕ 31.08.2020ರಂದು 'ವರ್ತಮಾನ ಸಾಮಾಜಿಕ ಆರ್ಥಿಕ ಸವಾಲು – ನಾರಾಯಣಗುರು ಸಂದೇಶದ ಬೆಳಕು' ಎನ್ನುವ ಆನ್‌ಲೈನ್ ವಿಚಾರ ಸಂಕಿರಣ ಆಯೋಜಿಸಲಾಯಿತು. ಡಾ. ಯೋಗೀಶ್ ಕೈರೋಡಿ ವಿಷಯ ಮಂಡನೆ ಮಾಡಿದರು. ಶಾಸಕ ಉಮಾನಾಥ ಕೋಟ್ಯಾನ್, ಮಸ್ಕತ್‌ನ ಶ್ರೀ ರಾಮಕೃಷ್ಣ ಬಾರ್ದಿಲ, ಮುಂಬೈಯ ನಿತ್ಯಾನಂದ ಕೋಟ್ಯಾನ್ ಮುಂತಾದವರು ಅತಿಥಿಗಳಾಗಿ ಮಾತನಾಡಿದರು. ಸುಮಾರು 35ರಷ್ಟು ಅಭ್ಯರ್ಥಿಗಳು ಪಾಲ್ಗೊಂಡರು. ಪ್ರೊ. ರಾಕೇಶ್ ಕುಮಾರ್ ವೆಬಿನಾರ್ ನಿರ್ವಹಿಸಿದರು.

7. ದಿನಾಂಕ 05.07.2020ರಿಂದ 13.09.2020ರ ವರೆಗೆ ಮಂಗಳೂರು ಆಕಾಶವಾಣಿಯಲ್ಲಿ ನಾರಾಯಣಗುರು ಜೀವ, ಸಾಧನೆಗಳ ಕುರಿತು ತಜ್ಞರ 15 ಉಪನ್ಯಾಸಗಳನ್ನು ಸರಣಿಯಲ್ಲಿ ಪ್ರಸಾರ ಮಾಡಲಾಯಿತು. ಆಯ್ದ ಶ್ರೋತೃಗಳಿಗೆ ಪುಸ್ತಕ ಬಹುಮಾನ ಹಾಗೂ ಪ್ರಮಾಣಪತ್ರ ಕಳುಹಿಸಲಾಯಿತು.
8. ಶ್ರೀಗುರು ಸ್ಮೃತಿ 2020 ಎಂಬ ಶೀರ್ಷಿಕೆಯಲ್ಲಿ ದಿನಾಂಕ 02.09.2020ರಂದು ಈ ವರ್ಷದ ಗುರುಜಯಂತಿಯಂದು ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ತತ್ಸಂಬಂಧಿ ಕಾರ್ಯಕ್ರಮ ಜರಗಿತು. ಬಿಲ್ಲವ ಸೇವಾ ಮಾಣಿಕ್ಯದಾತರ ಸಮಾಗಮ ಎಂಬ ಸಂಘಟನೆಯು ಈ ಆನ್‌ಲೈನ್ ಗುರು ಸಂದೇಶ ಪ್ರಬಂಧ ಮಂಡನೆಯ ಸ್ಪರ್ಧೆಯನ್ನು ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಸಹಯೋಗದಲ್ಲಿ ಏರ್ಪಡಿಸಿ ವಿವಿಧ ವಿಭಾಗಗಳ ಯುವಜನರಿಗೆ ಬಹುಮಾನಗಳನ್ನು ವಿತರಿಸಿದೆ.
9. ಶ್ರೀ ನಾರಾಯಣ ಗುರುಗಳ ಜಯಂತಿಯನ್ನು 13.09.2020ರಂದು ಜರಗಿಸಲಾಯಿತು. ಇದರ ಅಂಗವಾಗಿ ದಿನಾಂಕ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ಗುರು ವಂದನ' ಸಮಾರಂಭವನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರಗಿಸಲಾಗಿದೆ. ನಾರಾಯಣಗುರು ವಿಷಯವಾಗಿ ಪಿಹೆಚ್.ಡಿ ಮಾಡಿದ ಡಾ. ಶೇಷಪ್ಪ ಅಮೀನ್ ಅವರಿಗೆ ಅಭಿನಂದನೆ ಮತ್ತು ಬಹುಮುಖ ಬಾಲಪ್ರತಿಭೆ ಶ್ರೀ ರಕ್ಷಾ ಎಸ್.ಹೆಚ್. ಪೂಜಾರಿ ಇವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಅಬ್ಬಕ್ಕ ಟಿ.ವಿ. ಮೂಲಕ ಇದರ ನೇರಪ್ರಸಾರ ವ್ಯವಸ್ಥೆಗೊಳಿಸಲಾಯಿತು.

***************